ಹೊತ್ತಿನಲ್ಲಿ ಅಮರೇಶ ಮತ್ತು ಸನ್ಮತಿ ಬಂದರು. ನೀವು ಬಂದದ್ದು ಒಳ್ಳೆಯದಾಯಿತು. ನಿಮಗೆ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ ಎಂದು ಸನ್ಮತಿ ಹೇಳಿದರು. ನರಹರಿ ಮತ್ತು ಅವನ ಮಗನ ವಿಚಾರ. ನರಹರಿಯ ಮನೆ ಮತ್ತು ಜಾಗವನ್ನು ನಾವು ಕೊಂಡುಕೊಂಡಿದ್ದೆವು. ಒಂದು ವರ್ಷ ನನಗೆ ಬಾಡಿಗೆಗೆ ಕೊಡಿ ಎಂದು ಹೇಳಿ, ಬಾಡಿಗೆ ಕೊಟ್ಟು ನರಹರಿ ಇಲ್ಲೇ ಇದ್ದ. ಆರು ತಿಂಗಳ ಹಿಂದೆ ಅಪ್ಪ ಮತ್ತು ಮಗನ ನಡುವೆ ಏನೋ ಜಗಳವಾಯಿತು. ಸ್ವಲ್ಪವಲ್ಲ, ತುಂಬಾ ಜಗಳ ಆಯಿತು. ಆಸ್ತಿ ಮಾರಾಟ ಮತ್ತು ಹಣದ ವಿಚಾರದಲ್ಲಿ ಅಪ್ಪ ಮಗನಿಗೆ ಜಗಳ ಆದದ್ದಾಗಿರಬೇಕು. ಅದರ ಮರುದಿವಸ ಪುನಃ ಜಗಳವಾಯಿತು. ಅವತ್ತೇ ಮಗ ಇನ್ನು ನಿನ್ನ ಮುಖ ನೋಡುವುದಿಲ್ಲ. ಇಂಡಿಯದಲ್ಲಿ ಕಾಲಿಡುವುದಿಲ್ಲ ಎಂದು ಹೇಳಿ ಅಮೆರಿಕೆಗೆ ಹೋದ.

ಸುಕೃತಿ ಮತ್ತು ಕರುಣಾನಿಧಿ ಡೈವೋರ್ಸ್ ಆದದ್ದು ನಿಮಗೆ ಗೊತ್ತಿರಬಹುದು ಎಂದ ಸನ್ಮತಿ ಕೂಡಲೇ, ಹೇಳಲೇ ಬೇಕಾದ ಮುಖ್ಯ ವಿಷಯ ಎಂದರೆ, ನರಹರಿ ಸತ್ತದ್ದು ಎಂದರು.

'ಏನು, ನರಹರಿ ಸತ್ತದ್ದೆ? ಎಂದು ನಾನು ಕೇಳಿದೆ. ಅದು ಎಂಥ ಶಾಕ್ ಎಂದು ನಾನು ನಿಮಗೆ ಹೇಳಬೇಕಾಗಿಲ್ಲ' ಎಂದರು ರಾನಡೆ.

ಅಮರೇಶ ಮಾತಾಡಿದ, 'ಹೌದು ಅವನ ಮಗ ಹೋದ ಮರುದಿವಸವೇ. ರಾತ್ರಿ ನಿದ್ರೆಯಲ್ಲಿ ಪ್ರಾಣ ಹೋಗಿತ್ತು. ನಾವು ಡಾಕ್ಟರನ್ನು ಕರೆಸಿದೆವು. ಡಾಕ್ಟರ್ ಬಂದು ಹೆಣದ ಪರೀಕ್ಷೆ ಮಾಡಿ ನಿದ್ರೆಯಲ್ಲಿರುವಾಗ ಕಾರ್ಡಿಯಾಟಿಕ್ ಅರೆಸ್ಟ್ ಆಗಿದೆ ಎಂದರು. ಪೊಲೀಸರು ಬಂದು ಹೆಣವನ್ನು ಶವಪರೀಕ್ಷೆಗೆ ಆಸ್ಪತ್ರೆಗೆ ಒಯ್ದರು. ನಿದ್ರೆಯಲ್ಲಿದ್ದಾಗ ಹೃದಯಸ್ತಂಭನ ಆಗಿರುವುದು ಖಾತ್ರಿಯಾಯಿತು. ನಾವು ಹೆಣವನ್ನು ತಂದು ಶವಸಂಸ್ಕಾರ ಮಾಡಿದೆವು' ಎಂದು ಅಮರೇಶ ಹೇಳಿದ.

'ನನ್ನ ಹಸಿವು ಬಾಯಾರಿಕೆ ಸತ್ತೇ ಹೋಗಿತ್ತು. ನೀರನ್ನಾದರೂ ಕೇಳಿ ಕುಡಿಯಬಹುದಾಗಿತ್ತು ಅನಿಸಿತು, ಬೇಡ ಎಂದು ಸಕಲೇಶಪುರಕ್ಕೆ ನಡೆದೆ. ಹೋಟೆಲಿನಲ್ಲಿ ಬಾಯಾರಿಕೆ ಹಸಿವು ಇಂಗಿಸಿಕೊಂಡೆ' ಎಂದು ತುಸು ತಡೆದು, 'ಅವರು ಹೇಳಿದ್ದನ್ನೆಲ್ಲಾ ಹಾಗೆಯೇ ವಿವರ ಸಹಿತ ನಾನು ನಿಮಗೆ ಹೇಳಿಲ್ಲ. ಮುಖ್ಯವಾದದ್ದನ್ನು ಮಾತ್ರ ಹೇಳಿದ್ದೆ. ಅವರ ವಿವರಣೆಯನ್ನು ಕೇಳುತ್ತಿರುವಾಗ ಏನೋ ಒಂದು ಸಂದೇಹ ನನ್ನನ್ನು ಬಾಧಿಸುತ್ತಲೇ ಇತ್ತು. ಅದು ನಿಜ ವಿಷಯವನ್ನು ಹೇಳುವಂತೆ ಇರಲಿಲ್ಲ. ಕತೆ ಹೇಳುವಂತೆ ಇತ್ತು. ಯಾರಿಗಾದರೂ ತೀವ್ರವಾದ ಶಾಕ್ ನೀಡುವಂಥ ವಿಚಾರವನ್ನು ಅವರಿಬ್ಬರೂ ಉತ್ಸಾಹದಿಂದ ಲವಲವಿಕೆಯಿಂದ ಹೇಳುತ್ತಿದ್ದರು'.

ಸನ್ಮತಿ ಮತ್ತು ಅಮರೇಶ ಹೇಳಿದ ಕಟ್ಟುಕತೆಯ ಹಿಂದಿನ ಸತ್ಯಕತೆಯನ್ನು ರಾನಡೆಗೆ ಹೇಳಬೇಕಾಗಿಲ್ಲ. ಅವರಿಗೂ ಅದಕ್ಕೂ ಯಾವ ಸಂಬಂಧವೂ ಇಲ್ಲ ಎಂಬ ಭಾವದಲ್ಲಿ ನರಹರಿ ಮತ್ತು ಅಭಿ ಏನೂ ಮಾತಾಡದೆ ಇದ್ದರು.

ನರಹರಿ ಮತ್ತು ಅಭಿ ಸೂರ್ಯಕಾಂತ ರಾನಡೆಯನ್ನು ತಾವು ವಾಸಿಸುತ್ತಿದ್ದ ಹೋಟೆಲಿಗೆ ಕರೆದುಕೊಂಡು ಹೋದರು. ಅಪ್ಪ ಮತ್ತು ಮಗನ ಜೊತೆ ಊಟ ಮುಗಿಸಿದ ರಾನಡೆ ಹೊರಡಲು ಸಿದ್ಧವಾಗುತ್ತಾ, 'ಸನ್ಮತಿ ಮತ್ತು ಅಮರೇಶನಂಥ ಮನುಷ್ಯರು ಈ ಲೋಕದಲ್ಲಿ ಇದ್ದಾರೆಯೆ ಎಂದು ಉಂಟಾದ ಆಶ್ಚರ್ಯದಿಂದ ನನಗೆ ಇನ್ನೂ ಹೊರಬರಲಾಗಿಲ್ಲ. ನಿಮ್ಮ ಜೊತೆ ತುಂಬಾ ಮಾತಾಡಬೇಕು ಎಂಬ ಬಯಕೆಯಿದೆ. ಆದರೆ ಇವತ್ತು ನನ್ನ ತಲೆ ಕೆಲಸ ಮಾಡುತ್ತಿಲ್ಲ ಅಂತನಿಸ್ತಿದೆ. ಇನ್ನೊಮ್ಮೆ ಐದಾರು ತಿಂಗಳ ನಂತರ ಬರುತ್ತೇನೆ' ಎಂದರು. ಅವರ ಪ್ರಯಾಣಕ್ಕೆ ಶುಭ ಕೋರಿ ಕಳಿಸಿದ ಬಳಿಕ. ತಮ್ಮ ಹೋಟೆಲಿನ ಕೋಣೆಯಲ್ಲಿ ನರಹರಿ ಮತ್ತು ವಿಶ್ರಮಿಸಿದರು.

ಎರಡು ಗಂಟೆಯ ಗಾಢ ನಿದ್ರೆಯ ಬಳಿಕ ಇಬ್ಬರೂ ಎಚ್ಚರಗೊಂಡು ಕಾಫಿ ಕುಡಿದು, ನರಹರಿ ಆ ದಿನ ಬೆಳಿಗ್ಗೆ ಬಂದು ಬಿದ್ದಿದ್ದ ಪತ್ರಿಕೆಯನ್ನು ಕೈಗೆತ್ತಿಕೊಂಡ. ಅಭಿ ಹಿಂದಿನ ದಿನದ ದಿನಪತ್ರಿಕೆಯನ್ನು ತೆಗೆದುಕೊಂಡ.

ಓದಿನ ನಡುವೆ ನರಹರಿಯ ಮನಸ್ಸಿನಲ್ಲಿ ಒಂದು ಪ್ರಶ್ನೆ ಮೂಡಿತು. ತಾನು ಒಂದೂವರೆ ಎರಡು ವರ್ಷದ ತನ್ನ ಸಂಚಾರದ ವಿಷಯವನ್ನು ಗುಪ್ತವಾಗಿರಿಸಿಕೊಂಡೆ, ಹೇಳಬೇಕಾಗಿತ್ತಲ್ಲಾ ಎಂದನಿಸಿತು.

ತನ್ನ ಪ್ರಶ್ನೆಯನ್ನು ಅಭಿಗೆ ಹೇಳಿದಾಗ ಅಭಿ ನಕ್ಕ.

'ಪೂರ್ಣ ವಿರಕ್ತನಿಗೆ ಇಂಥ ಯೋಚನೆ ಬರುವುದಿಲ್ಲ ಅಪ್ಪಾ, ಒಂದರ್ಥದಲ್ಲಿ ನಾವು ವಿರಕ್ತರು ಎಂದು ನನಗನಿಸುತ್ತದೆ. ಬದುಕನ್ನು ಆ ಅರ್ಥದಲ್ಲೇ ಪರಿಭಾವಿಸಿ ಜೀವಿಸುವುದು ಹೇಗೆ ಎಂದು ಯೋಚಿಸೋಣ' ಎಂದು ನಕ್ಕು, 'ನೀನು ನಿನ್ನ ಆತ್ಮ ಕಥೆ ಬರೆಯುವ ಯೋಚನೆಯೇನಾದರೂ ಮಾಡಿದ್ದೀಯ?' ಎಂದ.

ಅದಕ್ಕೆ ನರಹರಿ ಕೂಡ ನಕ್ಕು, 'ಕೆಲವು ಆತ್ಮಕತೆಗಳನ್ನು ನಾನು ಓದಿದ್ದೇನೆ. ಆತ್ಮಕಥೆ ಹೇಗಿರಬೇಕು ಎಂದು ಯೋಚಿಸಿದ್ದಿದೆ. ಬರೆಯಬೇಕು ಎಂದು ನನಗೆ ಅನಿಸಿಲ್ಲ. ಆತ್ಮಕಥೆಯಲ್ಲಿ ಏನಿರಬೇಕು, ಏನಿರಬಾರದು ಅಂತ ನೀನು ಹೇಳಬಲ್ಲೆಯ ಅಭಿ?'

'ಹೀಗೆಯೇ ಇರಬೇಕು ಅಂತ ನಾನು ಹೇಳಲಾರೆ. ಆತ್ಮಕಥೆಯಲ್ಲಿ ವ್ಯಕ್ತಿ ತನ್ನ ಸ್ವಂತ ಅನುಭವಗಳನ್ನು ಮತ್ತು ಅದರ ಬೆಳಕಿನಲ್ಲಿ ಆತನ ಮನಸ್ಸಿನಲ್ಲಿ ಮೂಡಿದ ವಿಚಾರಗಳನ್ನು ಬರೆಯಬೇಕು. ಆ ಅನುಭವಕ್ಕೆ ನೇರವಾಗಿ ಸಂಬಂಧಿಸಿದ ವ್ಯಕ್ತಿಗಳ ಜೊತೆಗಿನ ಸಂಬಂಧ ಇತ್ಯಾದಿಗಳನ್ನು ಹೇಳಬಹುದು. ಒಟ್ಟಿನಲ್ಲಿ ಅದು ನಿನ್ನ ಮತ್ತು ಇತರರ ಬದುಕಿನ ಜೀವನ ಚರಿತ್ರೆಯ ಎಲ್ಲಾ ಬಗೆಯ ಕಾಳುಬೇಳೆಗಳನ್ನು ಹಾಕಿ ಮಾಡಿದ ಪಾಯಸದಂತೆ ಆಗಬಾರದು'

'ಅಪ್ಪಾ, ನನಗೆ ಗಿಡಮರಗಳು ಬಹಳ ಇಷ್ಟ, ಕೆಲವು ಮೃಗಗಳು ಮತ್ತು ಕೆಲವು ಪಕ್ಷಿಗಳನ್ನು ಪ್ರೀತಿಸುತ್ತೇನೆ. ಆದರೆ ಗೂಡಿನಲ್ಲಿ ಇರಿಸಿದ ಯಾವುದನ್ನೂ ನಾನು ನೋಡಲು ಇಚ್ಛಿಸುವುದಿಲ್ಲ. ಗಿಡ ಮರ ಬಳ್ಳಿಗಳನ್ನು ಕೂಡ ಬಂಧನದಲ್ಲಿಟ್ಟು ಅದರ ಚೆಂದ ನೋಡುವವರಿದ್ದಾರೆ. ಅದು ನನಗೆ ಇಷ್ಟವಲ್ಲ. ದೊಡ್ಡ ಮನೆ ನನಗೆ ಇಷ್ಟವಲ್ಲ. ನಾನು ಗಿಡಮರಗಳ, ಪಕ್ಷಿಗಳ ನಡುವೆ ಜೀವಿಸಲು ಇಷ್ಟಪಡುತ್ತೇನೆ'.

ಮರುದಿನ ಅಭಿ ಅಪ್ಪನೊಡನೆ, 'ಅಪ್ಪಾ, ನಾನು ಚೆನ್ನೈಗೆ ಹೋಗಿ ಸುಕೃತಿಯನ್ನು ಕಂಡುಬರುತ್ತೇನೆ' ಎಂದ.

ಅದನ್ನು ಕೇಳಿ ಅಪ್ಪನ ಮುಖದಲ್ಲಿ ವ್ಯಕ್ತವಾದದ್ದು ನಿರ್ಲಿಪ್ತತೆಯೇ, ನಿರಾಸಕ್ತಿಯೇ ಎಂದು ಅಭಿಗೆ ತಿಳಿಯಲಿಲ್ಲ. ನಿರಾಕರಣೆಯಲ್ಲ ಎಂದನಿಸಿತು.

ಅದೇ ದಿನ ಅಭಿ ಸುಕೃತಿಗೆ ಫೋನು ಮಾಡಿ, 'ಸುಕೃತಿ, ನನಗೆ ನಿನ್ನನ್ನೂ ಮಕ್ಕಳನ್ನೂ ಕಾಣಬೇಕೆನಿಸಿದೆ, ಬರ್ತೀಯ' ಎಂದ.

ಸುಕೃತಿಯ ದನಿ ಕೇಳಿಸಲಿಲ್ಲ. ಒಂದು ನಿಮಿಷ ಕಳೆಯಿತು.

ಅಭಿಯೇ ಹೇಳಿದ, 'ನೀನು ಮಕ್ಕಳ ಜೊತೆ ಬಾ ಅಂತ ನನ್ನ ಮಾತಿನ ಅರ್ಥ ಅಲ್ಲ. ಮಕ್ಕಳು ಸೂಟ್‌ಕೇಸ್‌ಗಳು, ಇತರ ಸಾಮಾನು ಸರಂಜಾಮುಗಳನ್ನು ತೆಗೆದುಕೊಂಡು ಮಕ್ಕಳನ್ನೂ ಕರೆದುಕೊಂಡು ಬರುವುದು ಸುಲಭ ಅಲ್ಲ ಅಂತ ನನಗೆ ಗೊತ್ತಿದೆ'

ಪುನಃ ನಿರುತ್ತರ. ಆದರೆ ಏನೋ ಸ್ವರ ಕೇಳಿಸಿತು. ಸುಕೃತಿ ಅಳುತ್ತಿದ್ದಾಳೆ ಎಂದನಿಸಿತು ಅಭಿಗೆ.

'ಈಗ ನೀನು ಎಲ್ಲಿ ವಾಸವಾಗಿರುವೆ?'

'ಒಂದು ವಾರದ ಹಿಂದೆ ಸಾನ್ ಫ್ರಾನ್ಸಿಸ್ಕೊ ಬಿಟ್ಟು ಚೆನ್ನೈಗೆ ಬಂದೆ. ನಾನು ಚೆನ್ನೈಯಿಂದ ಮಾತಾಡುತ್ತಿದ್ದೇನೆ'

'ಡೈವೋರ್ಸ್ ಆಗಿದೆ ಅನ್ನೋ ವಿಚಾರ ನಂಗೆ ಗೊತ್ತು. ನೀನು ಏನು ಮಾಡುತ್ತಿರುವೆ ಚೆನ್ನೈಯಲ್ಲಿ, ಮಕ್ಕಳೆಲ್ಲಿದ್ದಾರೆ?'

'ಮಕ್ಕಳು ನನ್ನ ಜೊತೆಯೇ ಇದ್ದಾರೆ' ಎಂದು ಸುಕೃತಿ, ಕ್ಷಣ ತಡೆದು

## ಭ್ರಮೆ

ಮಾನವ
ಮೂಳೆಮಾಂಸದ
ತಡಿಕೆ
ಕ್ಷಣಿಕಕ್ಕೆ
ಪ್ರೀತಿ ಪ್ರೇಮದ
ಹೊದಿಕೆ!

* * *

## ನಗು

ತುಟಿಯಂಚಿನ
ರಂಗವಲ್ಲಿ!

★ ಭಾಗ್ಯಲಕ್ಷ್ಮಿ ಬೆಂಡೆಹಕ್ಕಲು

